# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಯಲಹಂಕ ವಲಯ

ಸಂಖ್ಯೆ:ಬೃ.ಬೆಂ.ಮ.ಪಾ/ಮು.ಅ/ಯ.ವ/ಪಿ.ಆರ್/136/2020-21

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬಿಬಿಎಂಪಿ, ಬೆಂಗಳೂರು-92
ದಿನಾಂಕ:20/03/2020

### ಆಡಳಿತಾತ್ಮಕ ಅನುಮೋದನೆ

**ವಿಷಯ:** Engaging labour and tractor for removal of silt and debris at Vidyaranyapura HMT layout BEL layot and surrounding area in ward no-09 Vidyaranyapura

**ಉಲ್ಲೇಖ:** ಲೆಕ್ಕಶೀರ್ಷಿಕೆ ಪಿ-1771, ಜಾಬ್ ಸಂಕೇತ:009-20-000091

* ** *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ ವಿಭಾಗ) ಯಲಹಂಕ ವಲಯ ರವರು 2018-19ನೇ ಸಾಲಿನ ಆಯವ್ಯಯದ ಪಿ-1771, ರಡಿಯಲ್ಲಿ ಮೇಲ್ಕಂಡ ಕಾಮಗಾರಿಯನ್ನು ರೂ 15.00 (ಹದಿನೈದು ಲಕ್ಷಗಳು ಮಾತ್ರ) ಲಕ್ಷಗಳಿಗೆ ಕಾಮಗಾರಿಯನ್ನು ಕೈಗೊಳ್ಳಲು ಉಲ್ಲೇಖದಂತೆ ಸದರಿ ಕಾಮಗಾರಿಗೆ ಕಾಮಗಾರಿ ಸಂಕೇತ ದೊರೆತಿರುತ್ತದೆ. ಅದರಂತೆ ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ) ವಿಭಾಗರವರು ಅಂದಾಜು ಪಟ್ಟಿಯನ್ನು ತಯಾರಿಸಿ ಆಡಳಿತಾತ್ಮಕ ಮಂಜೂರಾತಿಗಾಗಿ ಸಲ್ಲಿಸಿರುತ್ತಾರೆ.

ಮುಂದುವರೆದದು ಮಾನ್ಯ ಆಯುಕ್ತರವರು ಮೂಲ ಕಡತದ ಕಂಡಿಕೆ 17ರಲ್ಲಿ ಪ್ರಸ್ತಾಪಿತ ಕಾಮಗಾರಿಗೆ ಅನುಮೋದನೆ ನೀಡಿದ್ದು, ಆದೇಶ ಸಂಖ್ಯೆ: ಬಿ12(1)/ಪಿ.ಆರ್/394/2019-20, ದಿನಾಂಕ:25-09-2019ರಲ್ಲಿ ನೀಡಿರುವ ಅಧಿಕಾರದನ್ವಯ ಸದರಿ ಕಾಮಗಾರಿಗೆ ಕೆಳಗಿನ ಷರತ್ತುಗಳನ್ವಯ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ ಹಾಗೂ ಆಡಳಿತಾತ್ಮಕ ಅನುಮೋದನೆ ಪುಸ್ತಕ ಪುಟ ಸಂಖ್ಯೆ 13 ಕ್ರ.ಸಂ 136 ರಲ್ಲಿ ಈ ಕೆಳಗಿನ ಷರತ್ತುಗಳಂತೆ ದಾಖಲಿಸಲಾಗಿದೆ.

**ಷರತ್ತುಗಳು:**

1. ಅಂದಾಜು ಪಟ್ಟಿಯ ಮೊತ್ತ ರೂ 2.00 ಲಕ್ಷಗಳಿಗೆ ಮೀರಿದ ಕಾಮಗಾರಿಗಳಿಗೆ ಟೆಂಡರ್ ಕರೆಯುವುದು.
2. ರಸ್ತೆ ಇತಿಹಾಸ ಪುಸ್ತಕದಲ್ಲಿ (Road History book/Register) ಈ ಕೆಲಸದ ವಿವರಗಳನ್ನು ದಾಖಲಿಸಿ ಕ್ರಮಬದ್ದಗೊಳಿಸುವುದು.
3. ಧರಪಟ್ಟಿ ಆಧಾರಿತವಲ್ಲದ ಅಂಶಗಳಿಗೆ ಡೆಟಾ ಧರವನ್ನು ತಯಾರಿಸಿ ಅನುಮೋದನೆ ಪಡೆಯುವುದು.
4. ಅಂದಾಜು ಪಟ್ಟಿಯಲ್ಲಿ ಮಾರುಕಟ್ಟೆ ದರ ಅಳವಡಿಸಿಕೊಂಡಿರುವ ಅಂಶಗಳಿಗೆ ಕೊಟೇಷನ್ ಕರೆದು ಅನುಮೋದನೆ ಪಡೆಯುವುದು.
5. ಕೆಲಸದ ಸ್ಥಳದಿಂದ ಸಾಗಣೆ ದೂರಕ್ಕೆ ಅನುಮೋದನೆ ಪಡೆಯುವುದು.
6. ಆರ್.ಸಿ.ಸಿ ಡೆಕ್‌ಸ್ಲಾಬ್, ಹರಿನೀರು ಮೋರಿಯ ಆಸರೆಗೋಡೆ ಮತ್ತು ಸೇತುವೆ ಕೆಲಸಗಳ ನಿರ್ವಹಣೆಗೆ ಮೊದಲು ವಿನ್ಯಾಸಕ್ಕೆ ಅನುಮೋದನೆ ಪಡೆಯುವುದು.
7. ಮೇಲಿನ ಕೆಲಸದ ವೆಚ್ಚವನ್ನು ಉಪ ಅನುದಾನದಡಿಯಲ್ಲಿ ಭರಿಸುವುದು.
8. ಬಿ.ಎಂ./ಬಿ.ಸಿ. ಅಳವಡಿಸಿಕೊಂಡಿರುವ ರಸ್ತೆಗಳಿಗೆ ನಿಯಮಾನುಸಾರ ಪರೀಕ್ಷೆಗಳನ್ನು ಕೈಗೊಂಡು ಫಲಿತಾಂಶದ ವರದಿಗಳನ್ನು ಪಡೆದುಕೊಳ್ಳುವುದು.
9. ಸದರಿ ಕೆಲಸವು ಎಂಬ್ಯಾಕ್ ಮೆಂಟ್/ಕಾಂಕ್ರೀಟ್/ಡಾಂಬರೀಕರಣ-ಬಿಎಂ-ಬಿಸಿ/WMM-WBM ಕಾಮಗಾರಿಗಳಾಗಿದ್ದಲ್ಲಿ, MORT & H ಅನ್ವಯ ಗುಣಮಟ್ಟ ಪರೀಕ್ಷೆ ಹಾಗೂ Core-cut ಪರೀಕ್ಷೆಗಳನ್ನು ಕೈಗೊಂಡು ಫಲಿತಾಂಶವನ್ನು ಪಡೆದುಕೊಳ್ಳುವುದು.

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬಿ.ಬಿ.ಎಂ.ಪಿ ಬೆಂಗಳೂರು-92

ಪ್ರತಿಯನ್ನು:

1) ಕಾರ್ಯಪಾಲಕ ಅಭಿಯಂತರರು (ಗುಣ ನಿಯಂತ್ರಣ) ವಿಭಾಗ ರವರ ಮಾಹಿತಿಗಾಗಿ.
2) ಕಾರ್ಯಪಾಲಕ ಅಭಿಯಂತರರು, (ಬ್ಯಾಟರಾಯನಪುರ). ವಿಭಾಗ ರವರ ಮಾಹಿತಿಗಾಗಿ.